ಓ.ಎಸ್. ನಂ.249/2021ರಲ್ಲಿ
ಪಿ.ಡಬ್ಲ್ಯೂ-1(ಎಂ.ನಾರಾಯಣಪ್ಪ)

ದಿನಾಂಕ 05-01-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 6ನೇ ಪ್ರತಿವಾದಿ ಪರ ಶ್ರೀ.ಕೆ.ಕೆ ವಕೀಲರಿಂದಃ-

ಈ ದಾವೆಯಲ್ಲಿ ನಾನು 3ನೇ ವಾದಿ. ಉಳಿದ ವಾದಿಗಳು ನನ್ನ ಅಣ್ಣ, ತಮ್ಮ ಅಕ್ಕ ತಂಗಿಯರು. ಪ್ರತಿವಾದಿ 1 ನನ್ನ ದೊಡ್ಡಮ್ಮ. ಪ್ರತಿವಾದಿ 2 ಅಣ್ಣ, 3ನೇ ಪ್ರತಿವಾದಿ ತಮ್ಮ, 4ನೇ ಪ್ರತಿವಾದಿ ತಂಗಿ. ಪ್ರತಿವಾದಿ 5 ಮತ್ತು 6 ನಮ್ಮ ಕುಟುಂಬದವರಲ್ಲ. ನಾನು ವ್ಯವಸಾಯ ಮಾಡುತ್ತೇನೆ. ಈಗ ನನ್ನ ವಯಸ್ಸು 51. ದಾವೆ ಸಲ್ಲಿಸುವ ಕಾಲಕ್ಕೆ ನನ್ನ ವಯಸ್ಸು 46. ನಾನು 9 ನೇ ತರಗತಿಯವರೆಗೆ ಕಲಿತಿದ್ದೇನೆ. ನನಗೆ ಕನ್ನಡ ಓದಲು ಬರೇಯಲು ಬರುತ್ತದೆ. ನನಗೆ ವ್ಯವಹಾರ ಜ್ಞಾನ ಚೆನ್ನಾಗಿದೆ. ಕೇಸನ್ನು ಏತಕ್ಕೆ ಹಾಕಿದ್ದೀರಿ ಎಂದರೆ ಸಾಕ್ಷಿ ದಾವಾ ಸ್ವತ್ತು ನನ್ನ ತಾತನ ಆಸ್ತಿ ಅದನ್ನು ನನ್ನ ದೊಡ್ಡಪ್ಪ ನಮ್ಮನ್ನು ಕೇಳದೇ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಪ್ರತಿವಾದಿ 5 ಮುತ್ತ 6 ರವರಿಗೆ ಮಾರಾಟ ಮಾಡಿದ್ದಾರೆ. ಯಾರ್ಯಾರು ಮಾರಾಟ ಮಾಡಿದ್ದಾರೆಂದರೆ ಸಾಕ್ಷಿ ನಮ್ಮ ದೊಡ್ಡಪ್ಪ ನಮ್ಮ ತಂದೆಯನ್ನು ಕರೆದುಕೊಂಡು ಹೋಗಿ ಹೆಬ್ಬೆಟ್ಟು ಹಾಕಿಸಿ ಮಾರಾಟ ಮಾಡಿದ್ದಾರೆ ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪ ಮಾರಾಟ ಮಾಡಿರುವ ವಿಚಾರ ನಮಗೆ 1996 ರಲ್ಲಿ ಗೊತ್ತಾಯಿತು. ಮಾರಾಟ ಮಾಡಿರುವ ವಿಚಾರ 1995 ರಲ್ಲಿ ಗೊತ್ತಾಯಿತು ಎಂದು ವಾದಿ ಪತ್ರದಲ್ಲಿ ಬರೆಸಿಲ್ಲ. ದಾವಾ ಸ್ವತ್ತು ಯಾರು ಸ್ವತ್ತು ಎಂದರೆ ನನ್ನ ತಾತನ ಸ್ವತ್ತು ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನನ್ನ ತಾತನ ಸ್ವತ್ತು ಎಂದು ವಾದಿ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿದ್ದೇ. ದಾವಾ ಸ್ವತ್ತು ನನ್ನ ತಾತನ ಸ್ವತ್ತು ಎಂದು ತೋರಿಸಲು ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಸ್ವತ್ತು ನನ್ನ ತಾತನ ಹೆಸರಿನಲ್ಲಿ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಮ್ಮ ತಾತನ ಹೆಸರಿನಿಂದ ನಮ್ಮ ತಂದೆಯ ಹೆಸರಿಗೆ ಪೌತಿ ಖಾತೆ ಆಗಿತ್ತು ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.